ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1313
3. ಉತ್ತರಿಸಬೇಕಾದ ದಿನಾಂಕ : 24-12-2021
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಮತ್ತು ಅತಿ ಹೆಚ್ಚು ವೆಚ್ಚ ಮಾಡಿದ ಜಿಲ್ಲೆಗಳು ಯಾವುವು; (ವರ್ಷವಾರು ಮತ್ತು ಜಿಲ್ಲಾವಾರು, ಮಾನವ ದಿನ ಮತ್ತು ವೆಚ್ಚವಾರು ಮಾಹಿತಿಯನ್ನು ನೀಡುವುದು)	**ಅನುಬಂಧ-1** ರಲ್ಲಿ ಲಗತ್ತಿಸಿದೆ
ಆ)	ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಮತ್ತು ಅತಿ ಹೆಚ್ಚು ವೆಚ್ಚ ಮಾಡಿದ ಗ್ರಾಮ ಪಂಚಾಯತಿಗಳು ಯಾವುವು; (ವರ್ಷವಾರು ಮತ್ತು ಗ್ರಾಮ ಪಂಚಾಯತಿವಾರು ಮಾಹಿತಿಯನ್ನು ನೀಡುವುದು)	**ಅನುಬಂಧ-2** ರಲ್ಲಿ ಲಗತ್ತಿಸಿದೆ
ಇ)	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 15 ದಿನಗಳಾದರೂ ಕೂಲಿ ಹಣ ಪಾವತಿಯಾಗದ ಪ್ರಕರಣ ಸಂಖ್ಯೆ ಎಷ್ಟು: ನಿಗದಿತ ಅವಧಿಯಲ್ಲಿ ಗ್ರಾಮ ಪಂಚಾಯತಿಗಳು ಹಾಜರಾತಿ ಮತ್ತು ಅಳತೆ ಪುಸ್ತಕವನ್ನು ದಾಖಲಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದರೂ ಕೂಲಿ ಹಣ ಪಾವತಿಯಾಗದಿರುವ ಪ್ರಕರಣಗಳೆಷ್ಟು; ಪಾವತಿಸಬೇಕಾದ ಕೂಲಿ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ಕಾಯದೆಯನುಸಾರ ಈ ಕೂಲಿಯಾಳುಗಳಿಗೆ 15 ದಿನಗಳಾದರೂ ಕೂಲಿ ಹಣ ಪಾವತಿಯಾಗದ ಕಾರಣ ಪಾವತಿಸಬೇಕಾದ ಭತ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)	**ಅನುಬಂಧ-3** ರಲ್ಲಿ ಲಗತ್ತಿಸಿದೆ
ಈ)	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವ ಯಾವ ಲೆಕ್ಕ ಪರಿಶೋಧನೆಯನ್ನು ಮಾಡಲಾಗುತ್ತಿದೆ; ಒಂದೇ ಕಾಮಗಾರಿಯನ್ನು ಅನೇಕ ವಿಧದಲ್ಲಿ ಲೆಕ್ಕಪರಿಶೋಧನೆಯನ್ನು	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ-2005 ಪ್ರಕರಣ-17 ರಂತೆ ನರೇಗಾ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳ ಸಾಮಾಜಿಕ ಪರಿಶೋಧನೆ ನಡೆಸಲಾಗುತ್ತದೆ.

	ಮಾಡುವ ಉದ್ದೇಶವೇನು; ಸಾಮಾಜಿಕ ಪರಿಶೋಧಕರು ಗ್ರಾಮ ಸಭಾ ನಡವಳಿಯಲ್ಲಿ ತಮ್ಮ ಅಭಿಪ್ರಾಯವನ್ನು ಗ್ರಾಮಸಭಾ ನಿರ್ಣಯದಂತೆ ದಾಖಲಿಸುತ್ತಿರುವುದನ್ನು ಗಮನಿಸಿಲಾಗಿದೆಯೇ; ಈ ವಸೂಲಾತಿ ಮತ್ತು ಆಕ್ಷೇಪಣೆಯನ್ನು ಸ್ಥಳೀಯ ಲೆಕ್ಕಪತ್ರ ವರ್ತುಲದ ಲೆಕ್ಕ ಪರಿಶೋಧಕರಿಂದ ದೃಢೀಕರಿಸಿ ಸ್ವೀಕರಿಸುವ ಬಗ್ಗೆ ಸರ್ಕಾರದ ಕ್ರಮವೇನು?	ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೇಮಿಸುವ ನರೇಗಾ ಯೋಜನೆಯ ಅನುಷ್ಠಾನೇತರ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುವ ಗ್ರಾಮ ಸಭೆಯಲ್ಲಿ ವರದಿಗಳನ್ನು ಮಾರ್ಗಸೂಚಿಯಂತೆ ಚರ್ಚಿಸಿ ತೀರ್ಮಾನಿಸಿದಂತೆ ಆಕ್ಷೇಪಣೆ/ವಸೂಲಾತಿ ವರದಿಗಳನ್ನು ತಯಾರಿಸಲಾಗುತ್ತದೆ. ಸಾಮಾಜಿಕ ಪರಿಶೋಧಕರು ತಮ್ಮ ಅಭಿಪ್ರಾಯವನ್ನಯ ಗ್ರಾಮ ಸಭೆಯ ಅಭಿಪ್ರಾಯದಂತೆ ದಾಖಲಿಸಲು ಅವಕಾಶವಿರುದಿಲ್ಲ. ಸಾಮಾಜಿಕ ಪರಿಶೋಧನಾ ವರದಿಯ ವಸೂಲಾತಿ ಮತ್ತು ಆಕ್ಷೇಪಣೆಯನ್ನು ಸ್ಥಳೀಯ ಲೆಕ್ಕಪತ್ರ ವರ್ತುಲದ ಲೆಕ್ಕ ಪರಿಶೋಧಕರಿಂದ ದೃಡೀಕರಿಸಲು ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ.

ಗ್ರಾಅಪ 82(34) ಉಖಾಯೋ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ